

ಪೂಜಾ ಹೆಗಡೆ
—ಪಿಟಿಐ ಚಿತ್ರ

# ಫಾರ್ಮ್‌ಗೆ ಮರಳಲು ಪೂಜಾ ತವಕ

ರಾಜಕಾರಣದಲ್ಲಿ ಒಂದು ಕಾಲಿಟ್ಟು, ಕರೂರಿನಲ್ಲಿ ಕಾಲ್ತುಳಿತ ಸಂಭವಿಸಿದ ಕಾರಣದಿಂದಾಗಿ ಸುದ್ದಿಯಲ್ಲಿರುವ ತಮಿಳು ನಟ ವಿಜಯ್ ಸಿನಿಮಾ 'ಜನ ನಾಯಗನ್' ಮುಂದಿನ ವರ್ಷದ ಮೊದಲ ತಿಂಗಳಲ್ಲಿ ಬಿಡುಗಡೆಯಾಗುವ ನಿರೀಕ್ಷೆ ಇದೆ. ಆ ಸಿನಿಮಾ ಮೇಲೆ ಭರವಸೆ ಇಟ್ಟುಕೊಂಡಿರುವವರಲ್ಲಿ ಮುಖ್ಯರಾದವರು ನಟಿ ಪೂಜಾ ಹೆಗಡೆ.

'ಹೈ ಜವಾನಿ ತೊ ಇಷ್ಕ್ ಹೋನಾ ಹೈ' ಹಿಂದಿ ಸಿನಿಮಾ ಚಿತ್ರೀಕರಣದಲ್ಲಿ ತೊಡಗಿರುವ ಪೂಜಾ, 'ಕಾಂಚನಾ 4' ತಮಿಳು ಸಿನಿಮಾದಲ್ಲಿಯೂ ಅಭಿನಯಿಸಿದ್ದಾರೆ. ಅದರ ನಂತರ ದುಲ್ಕರ್ ಸಲ್ಮಾನ್ ನಟಿಸಲಿರುವ ಹೊಸ ತಮಿಳು ಸಿನಿಮಾದಲ್ಲಿಯೂ ಬಣ್ಣ ಹಚ್ಚುವರು. 2024ರಲ್ಲಿ ಪೂಜಾ ನಟಿಸಿದ ಒಂದೂ ಸಿನಿಮಾ ತೆರೆಕಂಡಿರಲಿಲ್ಲ. ಹೀಗಾಗಿ ಅವರ ಸಿನಿಮಾ ವೃತ್ತಿಬದುಕಿನ ಗ್ರಾಫ್ ಕಡಿಮೆಯಾಯಿತೇನೊ ಎಂದುಕೊಂಡವರಿದ್ದರು. ಅದಕ್ಕೆ ಪೂಜಾ ಉತ್ತರ ಕೊಟ್ಟಿದ್ದಾರೆ.

'ಕೂಲಿ' ತಮಿಳು ಸಿನಿಮಾದ 'ಮೋನಿಕಾ' ಹಾಡಿನಲ್ಲಷ್ಟೇ ಕಾಣಿಸಿಕೊಂಡಿದ್ದ ಅವರು, ಆ ಗೀತೆಗೆ ಸಿಕ್ಕ ಭರ್ಜರಿ ಮೆಚ್ಚುಗೆ ಕಂಡು ಮೂಕವಿಸ್ಮಿತರಾಗಿದ್ದರು. ತಮಾಷೆಯೆಂದರೆ, ಆ ಹಾಡಿನಲ್ಲಿ ಮಲೆಯಾಳಂ ನಟ ಶೌಬಿನ್ ಅವರ ನೃತ್ಯ ಜನಪ್ರಿಯವಾಗಿತ್ತು. ಖುದ್ದು ಪೂಜಾ ಆ ಹಾಡನ್ನು ನೋಡಿದ ಮೇಲೆ ಶೌಬಿನ್ ಅಭಿಮಾನಿಯಾಗಿದ್ದಾಗಿ ಹೇಳಿದ್ದರು.

ಯೌವನಾವಸ್ಥೆಯಲ್ಲಿ ಮಾಡೆಲಿಂಗ್ ಹಾಗೂ ಜಾಹೀರಾತು ಚಿತ್ರೀಕರಣದ ಅನುಭವ ಪಡೆದ ಪೂಜಾ, ಸೌಂದರ್ಯ ಸ್ಪರ್ಧೆಗಳಲ್ಲಿ ಭಾಗವಹಿಸಿ ಜನಮನ ಗೆದ್ದ ಹಿನ್ನೆಲೆಯವರು. 'ನಾವು ಏನಾದರೊಂದು ಕೆಲಸ ಮಾಡುತ್ತಿರಬೇಕು. ಹಾಗೆ ಮಾಡುವ ಕೆಲಸವನ್ನು ಪ್ರೀತಿಸುತ್ತಿರಬೇಕು. ಆಗ ನಕಾರಾತ್ಮಕ ಪ್ರತಿಕ್ರಿಯೆಗಳು ನಮ್ಮ ತಲೆಯೊಳಗೆ ಇಳಿಯುವುದಿಲ್ಲ' ಎಂದು ಪೂಜಾ ಇತ್ತೀಚೆಗೆ ಹೇಳಿದ್ದು ಸಾಮಾಜಿಕ ಮಾಧ್ಯಮದಲ್ಲಿ ಸಣ್ಣ ಚರ್ಚೆಗೆ ಇಂಬುಗೊಟ್ಟಿತ್ತು.

ಯಾವುದೇ ವೇದಿಕೆ ಹತ್ತುವ ಮೊದಲು ಹಿಂದಿನ ದಿನ ರಾತ್ರಿ ಕನ್ನಡಿ ಎದುರು ನಿಂತು ತಾಲೀಮು ಮಾಡುವುದು ಪೂಜಾ ಅವರಿಗೆ ಅಭ್ಯಾಸವಾಗಿತ್ತು. ಸಿನಿಮಾ ಅಭಿನಯಕ್ಕೆ ಅವರು ಹೋಂವರ್ಕ್ ಮಾಡುತ್ತಿದ್ದುದೂ ಅದೇ ರೀತಿಯಲ್ಲಿ. ಪಳಗುತ್ತಾ ಹೋದಂತೆ ಅವರಿಗೆ ಆತ್ಮವಿಶ್ವಾಸ ದಕ್ಕಿತು.

ನಟ ವಿಜಯ್ ರಾಜಕೀಯ ಪ್ರವೇಶಿಸುತ್ತಿರುವುದರಿಂದ 'ಜನ ನಾಯಗನ್' ಅವರ ಕೊನೆಯ ಸಿನಿಮಾ ಆಗಲಿದೆ. ಹಾಗೆಂದು ಖುದ್ದು ವಿಜಯ್ ಹೇಳಿದ್ದಾರೆ. ಹೀಗಾಗಿ ಆ ಸಿನಿಮಾ ಮತ್ತೆ ತಾವು ಹಳೆಯ ಫಾರ್ಮ್ ಕಂಡುಕೊಳ್ಳಲು ನೆರವಾಗಬಹುದು ಎಂಬ ನಿರೀಕ್ಷೆಯನ್ನು ಪೂಜಾ ತಮ್ಮ ಕಣ್ಣಲ್ಲಿ ತುಂಬಿಕೊಂಡಿದ್ದಾರೆ. ■

# ಅಹಾನ್ ಹೇರ್‌ಕಟ್ಟು... ಹೊಸ ಸಿನಿಮಾ ಪ್ರಚಾರದ ಪಟ್ಟು

ಹಿಂದಿ ಸಿನಿಮಾ ನಿರ್ದೇಶಕ ಅಲಿ ಅಬ್ಬಾಸ್ ಝಫರ್ ಕಳೆದ ಒಂದೂವರೆ ದಶಕದಲ್ಲಿ ಬಿಡುವಿಲ್ಲದೆ ದುಡಿದಿರುವ ಸಿನಿಕರ್ಮಿ. 'ಗುಂಡೆ', 'ಟೈಗರ್ ಜಿಂದಾ ಹೈ', 'ಸುಲ್ತಾನ್' ಸಿನಿಮಾಗಳಲ್ಲಿನ ಊಹಾತೀತ ತಿರುವುಗಳು ಅವರೊಳಗಿನ ಕುಶಲಕರ್ಮಿಗೆ ಕನ್ನಡಿ ಹಿಡಿದಿದ್ದವು. ಸಲ್ಮಾನ್ ಖಾನ್ ಅಭಿನಯದ 'ಭಾರತ್' ಚಿತ್ರದ ಸೋಲು ಅವರು ಫಾರ್ಮ್ ಕಳೆದುಕೊಳ್ಳುವ ಬ್ಯಾಟ್ಸ್‌ಮನ್ ತರಹ ಆಡಬಲ್ಲರೆನ್ನುವುದಕ್ಕೆ ಸಾಕ್ಷಿಯಾಗಿ ಉಳಿದಿತ್ತು. ಶಾಹಿದ್ ಕಪೂರ್ ನಾಯಕರಾಗಿದ್ದ 'ಬ್ಲಡಿ ಡ್ಯಾಡಿ' ಎಂಬ ಸಾಹಸಪ್ರಧಾನ ಸಿನಿಮಾ ಎರಡು ವರ್ಷಗಳ ಹಿಂದೆ ತೆರೆಕಂಡಿದ್ದು ಈಗಾಗಲೇ ಮರೆತೇಹೋಗಿದೆ. ಅಂದರೆ, ಆ ಸಿನಿಮಾ ಠುಸ್ ಪಟಾಕಿ ಆಗಿತ್ತು.

ಬೆಂಗಳೂರಿನ ರಸ್ತೆಯಂತಹ ಸ್ಥಿತಿಯಲ್ಲಿರುವ ಬಾಲಿವುಡ್‌ನಲ್ಲಿ ನಿರ್ಮಾಣ ಸಂಸ್ಥೆಗಳು ಹೊಸತನಕ್ಕಾಗಿ ಹುಡುಕಾಡುವುದನ್ನಂತೂ ಬಿಟ್ಟಿಲ್ಲ. ಅದರಲ್ಲೂ ಯಶ್‌ರಾಜ್ ಫಿಲ್ಮ್ಸ್ ನಿರ್ಮಾಣ ಸಂಸ್ಥೆಯು ಈ ವಿಷಯದಲ್ಲಿ ಮಾರುಕಟ್ಟೆಯ ನಾಡಿಮಿಡಿತವನ್ನು ಅರಿತುಕೊಂಡೇ ಹೆಜ್ಜೆ ಇಡುತ್ತಾ ಬಂದಿದೆ. 'ಸೈಯಾರ' ಹಿಂದಿ ಸಿನಿಮಾದ ಹಿಂಡಿ ಹಿಪ್ಪೆ ಮಾಡಿದ ಭಾವುಕ ಪ್ರೇಮಕಥನಕ್ಕೆ ₹500 ಕೋಟಿಗೂ ಹೆಚ್ಚು ಹಣ ಬಂದು ಬಿದ್ದಿದ್ದು ಇದಕ್ಕೆ ತಾಜಾ ಉದಾಹರಣೆ. ಆ ಸಿನಿಮಾದ ನಾಯಕ ಅಹಾನ್ ಪಾಂಡೆ ಈಗ ಅಲಿ ಅಬ್ಬಾಸ್ ಝಫರ್ ಕಣ್ಣಿಗೆ ಬಿದ್ದಿದ್ದಾರೆ.



ಅಹಾನ್ ಪಾಂಡೆ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿರುವ ಚಿತ್ರ

ಅವರೊಳಗಿನ ಪ್ರಚ್ಛನ್ನಶಕ್ತಿಯನ್ನು ಮತ್ತಷ್ಟು ಬಂಡವಾಳ ಮಾಡಿಕೊಳ್ಳಲು ಯಶ್‌ರಾಜ್ ಫಿಲ್ಮ್ಸ್ ಮತ್ತೆ ಮುಂದಾಗಿದೆ. 'ಸೈಯಾರ' ಸಿನಿಮಾದಲ್ಲಿ ಬಂದ ದೊಡ್ಡ ಲಾಭ ಈ ನಿರ್ಮಾಣ ಸಂಸ್ಥೆಗೆ ಇನ್ನೊಂದು ಪ್ರಯೋಗಕ್ಕೆ ಕೈಹಾಕುವ ಆರ್ಥಿಕ ಅನುಕೂಲವನ್ನು ಒದಗಿಸಿಕೊಟ್ಟಿದೆ. ಅಹಾನ್ ಮುಖ್ಯಪಾತ್ರಧಾರಿಯಾಗಲಿದ್ದು, ಅಲಿ ಅಬ್ಬಾಸ್ ಆ್ಯಕ್ಷನ್–ಕಟ್ ಹೇಳಲಿದ್ದಾರೆ.

ಇನ್ನೂ ಹೆಸರಿಡದ ಈ ಸಿನಿಮಾ ಚಿತ್ರೀಕರಣ ಮುಂದಿನ ವರ್ಷದ ಮೊದಲ ತಿಂಗಳಿನಲ್ಲೇ ಶುರುವಾಗುವ ಸಾಧ್ಯತೆ ಇದೆ. ಇದೂ ಸಾಹಸಪ್ರಧಾನ ಚಿತ್ರವಾಗಿದ್ದು, ಈಗಿನಿಂದಲೇ ಪ್ರಚಾರದ ಝಲಕ್‌ಗಳು ಕಾಣತೊಡಗಿವೆ. 'ಸೈಯಾರ' ಚಿತ್ರದಲ್ಲಿ ಉದ್ದಾನುದ್ದ ಕೂದಲು ಬಿಟ್ಟಿದ್ದ ಅಹಾನ್ ಈಗ ಕೂದಲನ್ನು ವಿಪರೀತ ಟ್ರಿಮ್ ಮಾಡಿಸಿಕೊಂಡಿದ್ದಾರೆ. ಕುರುಚಲು ಗಡ್ಡ ಉಳಿಸಿಕೊಂಡಿದ್ದು, ಕೋಪಿಷ್ಟ ಯುವಕನ ಚಹರೆ ಹೊತ್ತಿದ್ದಾರೆ. ಹೇರ್‌ಕಟ್ ಮಾಡಿಸಿಕೊಂಡ ನಂತರ ತಮ್ಮದೊಂದು ಫೋಟೊ ತೆಗೆಸಿಕೊಂಡು, ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದಾರೆ. 'ಅಂಡ್ ದಟ್ಸ್ ಎ ಕಟ್' (ಇದೋ ನೋಡಿ ಕಟ್ ಮಾಡಿಸಿಕೊಂಡಿದ್ದಾಯಿತು) ಎಂಬ ಒಕ್ಕಣೆಯನ್ನೂ ಬರೆದಿದ್ದಾರೆ.

ಅಹಾನ್ ಅವರಿಗೆ ಶರ್ವರಿ ಜೋಡಿಯಾಗಲಿದ್ದಾರೆ. ಲವರ್ ಬಾಯ್ ಇಮೇಜ್‌ನಿಂದ ಆ್ಯಕ್ಷನ್ ಹುಡುಗನಾಗಿ ಅವರು ಹೇಗೆ ಅಭಿನಯಿಸಲಿದ್ದಾರೆ ಎನ್ನುವುದಷ್ಟೆ ಈಗ ಉಳಿದಿರುವ ಕುತೂಹಲ. ಅವರ ಹೊಸ ಹೇರ್‌ಕಟ್ ಕುರಿತೇ ಅಸಂಖ್ಯ ಪ್ರತಿಕ್ರಿಯೆಗಳು ಪುಂಖಾನುಪುಂಖವಾಗಿ ಪ್ರಕಟಗೊಳ್ಳುತ್ತಿವೆ. ಹೊಸಕಾಲದ ಸಿನಿಮಾ ಪ್ರಚಾರದ ಭರಾಟೆ ಇದು. ■